RNU AIR DHARWAD

# JANUARY 08, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಜನ ಪ್ರತಿನಿಧಿಗಳು, ಜನಮತಕ್ಕೆ ಬೆಲೆ ನೀಡಿದರೆ** ಮಾತ್ರ, ಪ್ರಜಾಪ್ರಭುತ್ವ ಸುದೃಢಗೊಳ್ಳಲು ಸಾಧ್ಯ – ಉಪ ರಾಷ್ಟ್ರಪತಿ ಜಗದೀಪ ಧನಕರ.
- **ಆಕಾಶವಾಣಿ ಧಾರವಾಡ ಕೇಂದ್ರಕ್ಕೆ,** ಇಂದಿಗೆ 75 ವರ್ಷ; ಅಮೃತ ಮಹೋತ್ಸವ ಸಂಭ್ರಮ.
- **ಉತ್ತರಕನ್ನಡ ಜಿಲ್ಲೆ,** ಜೊಯಿಡಾದಲ್ಲಿ ಇಂದು, ವನವಾಸಿ ರೈತರ ಗೆಡ್ಡೆ, ಗೆಣಸು ಮೇಳ.
- **ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ,** ನಾಡಿದ್ದು 10ನೇ ತಾರೀಖಿನಿಂದ, ಸೌಥ್ ಏ ್ಯ ಮಾಸ್ಟರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್.

<><><>

**ಈಗ ವಾರ್ತೆಗಳ ವಿವರ**

<><><>

**ಭಾರತಕ್ಕೆ ಸಂವಿಧಾನವೇ ಪರಮೋಚ್ಛ.** ಜನ ಪ್ರತಿನಿಧಿಗಳು, ಜನಮತಕ್ಕೆ ಬೆಲೆ ನೀಡಿದರೆ ಮಾತ್ರ, ಪ್ರಜಾಪ್ರಭುತ್ವ ಸುದೃಢಗೊಳ್ಳಲು ಸಾಧ್ಯ ಎಂದು, ಉಪ ರಾಷ್ಟ್ರಪತಿ ಜಗದೀಪ ಧನಕರ ಹೇಳಿದ್ದಾರೆ. ದಕ್ಷಿಣಕನ್ನಡ ಜಿಲ್ಲೆ, ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ, ನೂತನ ಸಂಕೀರ್ಣ 'ಶ್ರೀ ಸಾನಿಧ್ಯ' ಉದ್ಘಾಟಿಸಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ಜ್ಞಾನದೀಪ' ಕಾರ್ಯಕ್ರಮಕ್ಕೆ, ಚಾಲನೆ ನೀಡಿ ಮಾತನಾಡಿದರು. ದೇಶದ ನಾಗರಿಕ ಜೀವನ ವ್ಯವಸ್ಥೆ ಇನ್ನ ್ಟ ಬೆಳಗಬೇಕು; ದೇಶವನ್ನು ಉತ್ತುಂಗಕ್ಕೆ ಕೊಂಡೊಯ್ಯುವಲ್ಲಿ ಎಲ್ಲರೂ ಒಗ್ಗೂಡಬೇಕು. ಸಶಕ್ತ ಪ್ರಜಾಪ್ರಭುತ್ವ ನಮ್ಮಲ್ಲಿದೆ ಎಂದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

<><><>

**ವರಕವಿ ದ.ರಾ. ಬೇಂದ್ರೆ ಅವರು ಹೇಳಿದಂತೆ,** 'ಬಾನ ಕಡಲಲಿ ತೇಲಿ ಬಿಟ್ಟ, ನುಡಿದೋಣಿ, ಆಕಾಶವಾಣಿ'ಯ, ಧಾರವಾಡ ಕೇಂದ್ರ'ಕ್ಕೆ, ಇಂದಿಗೆ 75 ವರ್ಷ. ಅಮೃತ ಮಹೋತ್ಸವದ ಸಂಭ್ರಮ. ಇಂದು ಸಂಜೆ 5 ಗಂಟೆಗೆ, ಆಕಾಶವಾಣಿಯ ಆವರಣದಲ್ಲಿ, ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ.

<><><>

**'ಬಹು ಜನ ಸುಖಾಯ, ಬಹು ಜನ ಹಿತಾಯ'** ಧ್ಯೇಯದೊಂದಿಗೆ, ಜನವರಿ 8, 1950 ರಂದು, ಧಾರವಾಡ ಆಕಾಶವಾಣಿ ತನ್ನ ಸಾರ್ವಜನಿಕ ಪ್ರಸಾರ ಸೇವೆ ಆರಂಭಿಸಿತು. ಅಂದಿನ ಕೇಂದ್ರ ಸಚಿವರಾಗಿದ್ದ ಆರ್.ಆರ್. ದಿವಾಕರ ಅವರಿಂದ, ಆಕಾಶವಾಣಿ ಧಾರವಾಡ ಕೇಂದ್ರ ಲೋಕಾರ್ಪಣೆಗೊಂಡಿತ್ತು. ಪಂಡಿತ ಮಲ್ಲಿಕಾರ್ಜುನ ಮನ್ಸೂರ, ಪಂಡಿತ ಭೀಮಸೇನ ಜೋಶಿ, ವಿದುಷಿ ಗಂಗೂಬಾಯಿ ಹಾನಗಲ್ ಹಾಗೂ ಅಂಬಿಕಾತನಯದತ್ತ 'ವಂದೇ ಮಾತರಂ' ಹಾಡಿದ್ದು ವಿಶೇಷ.

<><><>

**ಧಾರವಾಡ ಆಕಾಶವಾಣಿಯ** ಕಾರ್ಯಕ್ರಮಗಳನ್ನು, ಕಳೆದ 74 ವರ್ಷಗಳಿಂದ ಆಲಿಸುತ್ತ ಬಂದ, ಅಂಧರ ಬದುಕಿಗೆ ದೀವಟಿಗೆಯಾದ, ಹಿರಿಯ ಸಮಾಜಸೇವಕ ಧಾರವಾಡದ ರಾಮಚಂದ್ರ ಧೋಂಗಡಿ ಅವರು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ರಾಮಚಂದ್ರ ಧೋಂಗಡಿ ಧ್ವನಿ 45 ಸೆಕೆಂದುಗಳು**

<><><>

**ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ,** X-band Doppler RADAR ಸ್ಥಾಪನೆಗೊಳ್ಳಲಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಕೇಂದ್ರ ತಂತ್ರಜ್ಞಾನ ಮತ್ತು ಭೂ ವಿಜ್ಞಾನಗಳ ರಾಜ್ಯ ಖಾತೆ ಸಚಿವ ಜಿತೇಂದ್ರ ಸಿಂಗ್ ತಮ್ಮ ಮನವಿಗೆ ಸ್ಪಂದಿಸಿದ್ದಾಗಿ, ಸಚಿವರು ತಿಳಿಸಿದ್ದಾರೆ. ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದ, 150 ರಿಂದ 175 ಕಿಲೋ ಮೀಟರ್‌ಗಳಿಗೂ ಹೆಚ್ಚು ಪ್ರದೇಶ ವ್ಯಾಪ್ತಿಯ, ನಿಖರವಾದ ಹವಾಮಾನ ಬದಲಾವಣೆ ಮತ್ತು ವೈಪರಿತ್ಯದ ಬಗ್ಗೆ, ರೈತರಿಗೆ ಪರಿಪೂರ್ಣ ಮಾಹಿತಿ ನೀಡಲಿದೆ. ನುರಿತ ಯುವ ವೃತ್ತಿಪರರಿಗೂ ಉದ್ಯೋಗಾವಕಾಶ ಸೃಷ್ಟಿಸಲಿದೆ, ಎಂದಿದ್ದಾರೆ.

<><><>

**ವಿದ್ಯುತ್ ಮಗ್ಗ ನೇಕಾರರು** ಹಾಗೂ ಮಗ್ಗ ಪೂರ್ವ ಘಟಕಗಳ ಕೆಲಸಗಾರರಿಗೆ, ಒಟ್ಟು ಒಂದು ಲಕ್ಷದ 17 ಸಾವಿರ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದು, ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಕೇಂದ್ರದ ಜವಳಿ ಸಚಿವಾಲಯದ ನೆರವಿನೊಂದಿಗೆ, ಕಾವೇರಿ ಹ್ಯಾಂಡ್‌ಲೂಮ್ಸ್ ಬೆಂಗಳೂರಿನ ಎಚ್.ಎಂ.ಟಿ. ಮೈದಾನದಲ್ಲಿ ಆಯೋಜಿಸಿದ, 15 ದಿನಗಳ, 'ಗಾಂಧಿ ಬುನ್ಕರ್ ಮೇಲಾ' ರಾಷ್ಟ್ರೀಯ ಕೈಮಗ್ಗ ಮೇಳವನ್ನು, ಉದ್ಘಾಟಿಸಿ, ಮಾತನಾಡಿದರು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ಕಾವೇರಿ ಹ್ಯಾಂಡ್‌ಲೂಮ್ಸ್ ಮಾರಾಟ ಮಳಿಗೆ ಆರಂಭಿಸಿ, ಬಜೆಟ್‌ನಲ್ಲಿ ಅಗತ್ಯ ಅನುದಾನ ಒದಗಿಸಲಾಗುವುದು, ಎಂದರು.

<><><>

**ಅರಣ್ಯ ಒತ್ತುವರಿ, ಅಕ್ರಮ ಮರ** ಕಡಿತ, ಕಳ್ಳ ಬೇಟೆ, ಅತಿಕ್ರಮ ಪ್ರವೇಶ ಇತ್ಯಾದಿ ಅರಣ್ಯ ಅಪರಾಧಗಳನ್ನು, 'ಗರುಡಾಕ್ಷಿ' ಆನ್ಲೈನ್ ಪೋರ್ಟಲ್‌ನಲ್ಲಿ ದಾಖಲಿಸಲಾಗುವುದು ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಗರುಡಾಕ್ಷಿಗೆ ಚಾಲನೆ ನೀಡಿ, ಬೆಂಗಳೂರು, ಭದ್ರಾವತಿ, ಶಿರಸಿ ಹಾಗೂ ಮಲೈ ಮಹದೇಶ್ವರ ವನ್ಯ ಜೀವಿ ವಿಭಾಗಗಳಲ್ಲಿ

ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ. ಇನ್ನು ಮುಂದೆ ಎಫ್.ಐ.ಆರ್. ಅನ್ನೂ ಗರುಡಾಕ್ಷಿ ತಂತ್ರಾಂಶದ ಮೂಲಕವೇ ದಾಖಲಿಸಲಾಗುವುದು, ಎಂದು ಸಚಿವರು ಹೇಳಿದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಉತ್ತರಕನ್ನಡ ಜಿಲ್ಲೆ,** ಜೊಯಿಡಾದಲ್ಲಿ ಇಂದು, ಕಾಳಿ ರೈತ ಉತ್ಪಾದಕರ ಸಂಘದ ವತಿಯಿಂದ, ವನವಾಸಿ ರೈತರ ಗೆಡ್ಡೆ, ಗೆಣಸು ಹಾಗೂ ಸೊಪ್ಪುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿತವಾಗಿದೆ. ಅಳಿವಿನಂಚಿನಲ್ಲಿರುವ ಅಪರೂಪದ ಗೆಡ್ಡೆ, ಗೆಣಸುಗಳ ಖಾದ್ಯಗಳನ್ನು ಸವಿಯಲು, ಸಂಘಟಕರು ಅವಕಾಶ ಕಲ್ಪಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಮೇಳದ ಸಂಯೋಜಕ, ಡೇರಿಯಾದ ಡಾಕ್ಟರ್ ಜಯಾನಂದ ಡೇರೇಕರ್.

<><><>

**ಡಾ. ಜಯಾನಂದ ಡೇರೇಕರ್ ಧ್ವನಿ 40 ಸೆಕೆಂದುಗಳು**

<><><>

**ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ,** ಕೃಷಿ ಮತ್ತು ಕೃಷಿ ಅವಲಂಬಿತ ವಿಸ್ತರಣಾ ಚಟುವಟಿಕೆಗಳಲ್ಲಿ, ಕೃತಕ ಬುದ್ಧಿಮತ್ತೆ ಬಳಕೆ ಕುರಿತ, ರಾಷ್ಟ್ರೀಯ ಸಮ್ಮೇಳನವನ್ನು, ನಾಳೆ ಮತ್ತು ನಾಡಿದ್ದು, ರಾಯಚೂರಿನ ಶ್ರೀ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ಆಯೋಜಿಸಿದೆ.

<><><>

**'ಮಾಧ್ಯಮ ಮತ್ತು ಕೃತಕ ಬುದ್ಧಿಮತ್ತೆ'** ಕುರಿತು, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, ಶ್ರೀ ರಾ.ಹ.ದೇಶಪಾಂಡೆ ಸಭಾ ಭವನದಲ್ಲಿ, ಗದಿಗೆಯ್ಯಾ ಹೊನ್ನಾಪುರಮಠ ದತ್ತಿ ಅಂಗವಾಗಿ, ದಿ ಹಿಂದು ಪತ್ರಿಕೆಯ ಹಿರಿಯ ಸಹಾಯಕ ಸಂಪಾದಕ, ಬೆಳಗಾವಿಯ ಹೃಷಿಕೇಶ ಬಹಾದ್ದೂರ ದೇಸಾಯಿ ವಿಶೇಷ ಉಪನ್ಯಾಸ ನೀಡಿದರು.

<><><>

**ಹೃಷಿಕೇಶ ಬಹದ್ದೂರ ದೇಸಾಯಿ ಧ್ವನಿ 48 ಸೆಕೆಂದುಗಳು**

<><><>

**ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ,** ಕರ್ನಾಟಕ ಪಾಲಿಟೆಕ್ನಿಕ್, ಎ.ಐ.ಸಿ.ಟಿ.ಇ. ಯಿಂದ ಸ್ವಾಯತ್ತತೆ ಪಡೆದ, ಪ್ರಥಮ ಸರಕಾರಿ ಪಾಲಿಟೆಕ್ನಿಕ್ ಎನ್ನುವುದು ಹೆಮ್ಮೆಯ ವಿಚಾರ ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಎಂ.ಸಿ.ಸುಧಾಕರ ಹೇಳಿದರು. ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ, 45ನೇ ರಾಜ್ಯ ಮಟ್ಟದ ಅಂತರ್ ಪಾಲಿಟೆಕ್ನಿಕ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು, ಮಾತನಾಡಿದರು.

<><><>

**ಸೌತ್ ಇಂಡಿಯಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಶನ್** ವತಿಯಿಂದ, ನಾಡಿದ್ದು 10ನೇ ತಾರೀಖಿನಿಂದ 12ರ ವರೆಗೆ, ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ, ಸೌಥ್ ಏ ್ಯಾ ಮಾಸ್ಟರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಆಯೋಜಿಸಲಾಗಿದೆ ಎಂದು, ಆಯೋಜಕ ಸುರೇಂದ್ರ ಶೆಟ್ಟಿ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾಹಿತಿ ನೀಡಿದ ಅವರು, ಕ್ರೀಡಾಕೂಟದಲ್ಲಿ ದೇಶ

ವಿದೇಶಗಳ 2 ಸಾವಿರ ಜನ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ ಎಂದರು.

<><><>

**ವಿಜಯನಗರ ಜಿಲ್ಲೆ ಹರಪನಹಳ್ಳಿ** ತಾಲೂಕಿನ, ಎಚ್.ಎ. ನಯನಾ, ಹೊಸ ದಿಲ್ಲಿಯ ಕರ್ತವ್ಯಪಥದ ಗಣರಾಜ್ಯೋತ್ಸವ ಕವಾಯತಿನಲ್ಲಿ ಭಾಗವಹಿಸಲಿದ್ದಾರೆ. ಕರ್ನಾಟಕ ಮತ್ತು ಗೋವಾ ಎನ್.ಸಿ.ಸಿ. ನಿರ್ದೇಶನಾಲಯವನ್ನು ಪ್ರತಿನಿಧಿಸಲಿರುವ ಕೆಡೆಟ್ ನಯನಾ, ಪ್ರಸ್ತುತ ಧಾರವಾಡದ ಕರ್ನಾಟಕ ಕಲಾ ಕಾಲೇಜಿನ ಪದವಿ ವಿದ್ಯಾರ್ಥಿಯಾಗಿದ್ದಾರೆ. ಕ್ಯಾಪ್ಟನ್ ವಾಯ್.ಎಸ್. ರಾವುತ್, ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡಿರುವ ಹಿರಿಯ ಕೆಡೆಟ್, ವಿನಾಯಕ್ ಹತ್ತೂರೆ ಮಾರ್ಗದರ್ಶನ ಮಾಡಿದ್ದಾರೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ವಿಜಯನಗರ ಜಿಲ್ಲೆ, ಮೈಲಾರದ ಡೆಂಕನ ಮರಡಿಯಲ್ಲಿ,** ಫೆಬ್ರವರಿ 14 ರಂದು ಸಂಜೆ 5.30ಕ್ಕೆ ಶ್ರೀ ಮೈಲಾರ ಕಾರ್ಣಿಕೋತ್ಸವ ನಡೆಯಲಿದೆ.

<><><>

**ಹಿರಿಯ ಸಾಹಿತಿ ನಾ. ಡಿಸೋಜಾ** ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಶಿವಮೊಗ್ಗ ಜಿಲ್ಲೆ, ಸಾಗರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.

<><><>

**ಧಾರವಾಡ ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ,** ಕಳೆದ 8 ತಿಂಗಳಲ್ಲಿ, ಧಾರವಾಡ ಜಿಲ್ಲೆಯ 11 ಹಾಗೂ ಹೊರ ಜಿಲ್ಲೆಯ 24 ಗರ್ಭಿಣಿಯರು ಸೇರಿ, ಒಟ್ಟು 35 ತಾಯಂದಿರು ಸಾವನ್ನಪ್ಪಿದ್ದಾರೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

**ಕೇರಳ ತಿರುವನಂತಪುರದ,** ವಿಧಾನಸಭೆ ಸಚಿವಾಲಯದಲ್ಲಿ, 3ನೇ ಆವೃತ್ತಿಯ ಅಂತಾರಾಷ್ಟ್ರೀಯ ಪುಸ್ತಕ ಮೇಳದ, ಉದ್ಘಾಟನಾ ಸಮಾರಂಭದಲ್ಲಿ, ಮುಖ್ಯ ಅತಿಥಿಯಾಗಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಭಾಗವಹಿಸಿದ್ದರು.

<><><>

**ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ,** ಶಾಂತಿ ಸಾಗರ ಮತ್ತು ಹರಿಹರ ತಾಲೂಕಿನ ಕೊಂಡಜ್ಜಿ ಕೆರೆಯಲ್ಲಿ, ಜಲ ಸಾಹಸ ಕ್ರೀಡೆಗಳ ತರಬೇತಿ ಅಕಾದೆಮಿ ಸ್ಥಾಪನೆ ಸಂಬಂಧ, ಪ್ರಸ್ತಾವ ಸಿದ್ಧ ಪಡಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಹೇಳಿದ್ದಾರೆ.

<><><>

**ಮಂಡ್ಯ ಜಿಲ್ಲೆ, ಕೆ.ಆರ್.ಎಸ್. ಅಣೆಕಟ್ಟೆಯಿಂದ,** ಬೆಳೆಗಳಿಗೆ ಜನವರಿ 10 ರಿಂದ 18 ದಿನಗಳು, ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗುವುದು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಜನ ಪ್ರತಿನಿಧಿಗಳು, ಜನಮತಕ್ಕೆ ಬೆಲೆ ನೀಡಿದರೆ** ಮಾತ್ರ, ಪ್ರಜಾಪ್ರಭುತ್ವ ಸುದೃಢಗೊಳ್ಳಲು ಸಾಧ್ಯ – ಉಪ ರಾಷ್ಟ್ರಪತಿ ಜಗದೀಪ ಧನಕರ.
- **ಆಕಾಶವಾಣಿ ಧಾರವಾಡ ಕೇಂದ್ರಕ್ಕೆ,** ಇಂದಿಗೆ 75 ವರ್ಷ; ಅಮೃತ ಮಹೋತ್ಸವ ಸಂಭ್ರಮ.
- **ಉತ್ತರಕನ್ನಡ ಜಿಲ್ಲೆ,** ಜೊಯಿಡಾದಲ್ಲಿ ಇಂದು, ವನವಾಸಿ ರೈತರ ಗೆಡ್ಡೆ, ಗೆಣಸು ಮೇಳ.
- **ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ,** ನಾಡಿದ್ದು 10ನೇ ತಾರೀಖಿನಿಂದ, ಸೌಥ್ ಏ ್ಯ ಮಾಸ್ಟರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್.

<><><>